# ಮೋಹಕ ಪ್ಲಾಟಿನಂ ಎವಾರ

ಪ್ಲಾಟಿನಂ ಆಭರಣ ಯುವ ಮನಸ್ಸನ್ನು ಗೆಲ್ಲುತ್ತಿದೆ. ಹೊಸ ಹೊಸ ವಿನ್ಯಾಸಗಳು ವಧೂವರರನ್ನೂ ಸೆಳೆಯುತ್ತಿವೆ. ಪಾರ್ಟಿ, ಶುಭ ಸಮಾರಂಭಗಳಿಗೆ ಧರಿಸಲೆಂದೇ ವಿನೂತನ ವಿನ್ಯಾಸದ ಆಭರಣ ಲಭ್ಯ. ಉಡುಗೊರೆಯಾಗಿಯೂ ನೀಡಲು ಸೂಕ್ತವಾದ ಈ ಆಭರಣ 'ಎವಾರ' ಸಂಗ್ರಹದೊಂದಿಗೆ ಹೊಸ ಅವತಾರದಲ್ಲಿ ಮಾರುಕಟ್ಟೆಗೆ ಲಗ್ಗೆ ಇಟ್ಟಿದೆ.

■ **ಉಮಾ ಅನಂತ್**

**ಚಿತ್ರಗಳು: ಬಿ.ಎಚ್. ಶಿವಕುಮಾರ್**

ಆಕರ್ಷಕ, ಎಲಿಗೆಂಟ್ ಲುಕ್ ನೀಡುವ ಕಾರಣಕ್ಕಾಗಿ ಪ್ಲಾಟಿನಂ ಆಭರಣ ಈಗೀಗ ಯುವತಿಯರನ್ನು ಬಹುವಾಗಿ ಸೆಳೆಯುತ್ತಿದೆ. ಹೀಗಾಗಿ ವಜ್ರ, ಚಿನ್ನ, ಬೆಳ್ಳಿ ಆಭರಣಗಳನ್ನೂ ಹಿಂದಿಕ್ಕಿ ಪ್ಲಾಟಿನಂ ಒಡವೆ ಇಂದು ಜನಪ್ರಿಯತೆಯ ಹಾದಿ ಹಿಡಿದಿದೆ. ಹಗುರ, ಅಂದದ ವಿನ್ಯಾಸ ಹಾಗೂ ಒಂದೇ ಒಂದು ಒಡವೆಯಲ್ಲಿ ಎದ್ದು ಕಾಣುವಂತಹ ಸೆಳೆತ, ಆಕರ್ಷಣೆಯಿಂದಾಗಿ ಪ್ಲಾಟಿನಂ ಒಡವೆಗಳು ಬೇಡಿಕೆ ಪಡೆಯುತ್ತಿವೆ.

ನೆಕ್ಲೇಸ್, ಕಿವಿಯೋಲೆ, ಪೆಂಡೆಂಟ್, ಉಂಗುರಗಳ ಜತೆಗೆ ಈಗೀಗ ಬ್ರೈಡಲ್ ಒಡವೆಗಳು ಹೆಸರುವಾಸಿಯಾಗುತ್ತಿದ್ದು, ನವವಿವಾಹಿತ ಜೋಡಿಗಳಿಗೆ ಹೇಳಿ ಮಾಡಿಸಿದಂತಹ ಆಭರಣಗಳ ಸಂಗ್ರಹ ಮಾರುಕಟ್ಟೆಗೆ ಬಂದಿದೆ. ಮದುವೆ ನಿಶ್ಚಯವಾದ ಜೋಡಿಗಳು ಡೈಮಂಡ್, ಚಿನ್ನದ ಉಂಗುರ, ಬ್ರೇಸ್‌ಲೆಟ್, ಸರ, ನೆಕ್ಲೇಸ್‌ಗಳನ್ನು ಬಿಟ್ಟು ಹಗುರವಾದ ಪ್ಲಾಟಿನಂ ಒಡವೆಯತ್ತ ಮೋಹಿತರಾಗುತ್ತಿದ್ದಾರೆ. ಈ ಮಾತಿಗೆ ಪುಷ್ಟಿ ನೀಡುವಂತೆ ಇತ್ತೀಚೆಗೆ ವಿವಾಹವಾದ ಕ್ರಿಕೆಟಿಗ ಜಹೀರ್‌ಖಾನ್ ಹಾಗೂ ಬಾಲಿವುಡ್ ನಟಿ ಸಾಗರಿಕ ಘಾಟ್ಗೆ ಪ್ಲಾಟಿನಂ ಆಭರಣ ಧರಿಸಿದ್ದು ಮಾತ್ರವಲ್ಲ ಯುವಜನರು ಇದರತ್ತ ಚಿತ್ತಹರಿಸುವಂತೆ ಪ್ರಚಾರವನ್ನೂ ಮಾಡುತ್ತಿದ್ದಾರೆ. ಅಂದ ಹಾಗೆ ಈ ಜೋಡಿ ಬೆಂಗಳೂರಿನ ಆಭರಣ ಮಳಿಗೆಯಲ್ಲಿ 'ಪ್ಲಾಟಿನಂ ಎವಾರ' ಸಂಗ್ರಹವನ್ನು ಅನಾವರಣಗೊಳಿಸಲು ಈಚೆಗೆ ಪ್ರಚಾರ ರಾಯಬಾರಿಯಾಗಿ ಬಂದಿದ್ದು ಪ್ಲಾಟಿನಂ ಆಭರಣವನ್ನು ತೊಟ್ಟುಕೊಂಡು ಸಂಭ್ರಮಿಸಿದರು.

ಈ ಒಡವೆ ಸಂಗ್ರಹವನ್ನು ಅಂತಾರಾಷ್ಟ್ರೀಯ ಮಟ್ಟದ ಒಡವೆ ವಿನ್ಯಾಸಗಳಿಂದ ಸ್ಫೂರ್ತಿ ಪಡೆದು ರೂಪುಗೊಳಿಸಲಾಗಿದ್ದು, ಜಗತ್ತಿನ ಎಲ್ಲ ವಧೂವರರಿಗೂ ಇಷ್ಟವಾಗುವ ಶೈಲಿಯಲ್ಲಿ ತಯಾರಿಸಲಾಗಿದೆ. ಅಲ್ಲದೆ ಪ್ಲಾಟಿನಂ ಒಡವೆಗಳಲ್ಲಿ ಹಲವು ಸೂಕ್ಷ್ಮ ಕುಸುರಿಗಳಿದ್ದು, ತಕ್ಷಣ ಸೆಳೆಯುವಂತಿದೆ.

ಎವಾರ ಸಂಗ್ರಹದಲ್ಲಿ ಹಲವು ವೈವಿಧ್ಯಗಳಿವೆ. ಗಾಢವಾಗಿ ಎದ್ದುಕಾಣುವಂಥ ಸೊಬಗಿದೆ. ಮಹಿಳೆಯರಲ್ಲಿ 'ಆಧುನಿಕ ಸ್ತ್ರೀತ್ವ' ಮತ್ತು ಪುರುಷರಲ್ಲಿ 'ಧೈರ್ಯಶಾಲಿ ಗುಣ'ಗಳನ್ನು ಬಿಂಬಿಸುತ್ತದೆ. ಹಲವು ವಿನ್ಯಾಸಗಳನ್ನು ಒಂದುಗೂಡಿಸಿ ವಿಶೇಷ ಸೊಬಗಿನ ಸಮಕಾಲೀನ ಸಂಗ್ರಹ ಮಾಡಿದಂತಿವೆ ಈ ಒಡವೆಗಳು.

ಬ್ರೈಡಲ್ ಸಂಗ್ರಹ ಇಂದಿನ ವಧುಗಳ ವಿವಾಹ ನಂತರದ ಜೀವನಶೈಲಿಗೆ ಪೂರಕವಾಗಿವೆ. ಈ ಸಂಗ್ರಹದಲ್ಲಿನ ಪುರುಷರ ಆಭರಣಗಳು ಜ್ಯಾಮಿತಿಯ ರೂಪಗಳಿಂದ ಸ್ಫೂರ್ತಿ ಪಡೆದಿದ್ದು ರೇಖೆಗಳು, ರಚನೆಗಳು ಮತ್ತು ದ್ವಂದ್ವ

